doc-528
T-P-2

ಗೋರಕ್ಷಣಾ
GORAKSHANA

8 ನೇ ವರ್ಷ — 1958 ನೇ ಮೇ ತಾ || 31 May 58

ಗೋರಕ್ಷಣಾ, ಪ್ರಾಣಿದಯಾ ಕಾರ್ಯಗಳು ಹೆಚ್ಚಿಚ್ಚಾಗಿ ನಡೆಯಲಿ

ಗೋರಕ್ಷಣ ಪತ್ರಿಕೆಗೆ ಬೆಂಬಲಿಗರಾಗಿರಿ

ಗೋರಕ್ಷಣೆ, ಪ್ರಾಣಿದಯೆ, ಪಶುವೈದ್ಯ, ಶಾಕಾಹಾರ ವಿಚಾರಗಳ ಪ್ರಚಾರದ ಏಕೈಕ ಕನ್ನಡ ಪತ್ರಿಕೆ ; ವರ್ಷಕ್ಕೆ ಪರದೇಶಕ್ಕೆ 6 ಆಣೆ ಮೈನೂರಿನಲ್ಲಿ 4 ಆಣೆ

ಪೋಷಕರು ರೂ 25, ಬೆಂಬಲಿಗರು ರೂ 10 (ಒಂದೇಸಾರಿ) ಮಾತ್ರ

ಗೋರಕ್ಷಣ ಪತ್ರಿಕೆಯಲ್ಲಿ ಪ್ರಕಟಿಸಲು ಅನುಕೂಲವಾದ ಲೇಖನಗಳನ್ನು ವಾರ್ತೆಗಳನ್ನೂ ಸಾದರದಿಂದ ಸ್ವೀಕರಿಸಲಾಗುವುದು.

Advertise in Goraksana and help the pious cause

ವಿಳಾಸ : ಗೋರಕ್ಷಣ ಆಫೀಸ್, ಚಾಮರಾಜಪುರಂ, ಮೈಸೂರು

ಗೋಸಂಬಂಧದ ಅಪರಾಧಗಳಿಗೆ

ಗೋವಧೆ ಮಾಡಿದವನು, ಹಾಗೂ ಗೋವನ್ನು ಶಿಕ್ಷಿಸುವವರು, ಬೈಯುವವರು, ಗೋವು ಉಸಿರಾಡುವಾಗ ಊಟಮಾಡುವವರು, ಇದೇ ಮೊದಲಾದ ಪಾಪಗಳನ್ನು ಮಾಡಿದವರು ಗ್ರಂಥಿಯೆಂಬ ಬೇನೆಯಿಂದ ಬಳಲುತ್ತಾರೆ ; ಮಂತ್ರಾನಂತರ ಗೋವಿನ ಮೈ ಮೇಲೆ ಎಷ್ಟು ಕೂದಲಿವೆಯೋ ಅಷ್ಟು ದಿವಸ ನರಕದಲ್ಲಿ ಯಾತನೆಯನ್ನನುಭವಿಸುತ್ತಿರುತ್ತಾರೆ : ಇಂತಹ ಘೋರವಾದ ಗೋಹತ್ಯ ಪಾಪ ನಿವಾರಣೆಯಾಗಬೇಕಾದರೆ ಗೋಸಮೂಹದಲ್ಲಿ ಕಲೆತು, ಅವುಗಳ ಪಾದದಿಂದ ಏಳುವ ಧೂಳಿಯನ್ನು ಸೇವಿಸಿ, ಗೋಮೂತ್ರ ಕುಡಿದು, ಗೋವಿನ ಚರ್ಮ ಹೊದ್ದುಕೊಂಡು ಗೋಕೊಟ್ಟಿಗೆಯಲ್ಲಿ ಮಲಗುತ್ತಾ ಚಾಂದ್ರಾಯಣ ವ್ರತವನ್ನು ಆಚರಿಸಬೇಕು. (ಪರಾಶರ ಸ್ಮೃತಿ)

ಗೋಪಾಲನೆ ಬಗ್ಗೆ ಗಾಂಧೀಯವರ ಅಮೃತವಾಣಿ

ಗೋಪಾಲನೆಯೆಂಬುದು ಹಿಂದೂಧರ್ಮವು ಜಗತ್ತಿಗೆ ನೀಡಿದ ಮಹಾವರ ; ಗೋವುಗಳೆಂದರೆ ನನ್ನ ಮನಸ್ಸಿಗೆ ಸಂಪೂರ್ಣವಾಗಿ ಎರಡನೇ ತರಗತಿಯ ಮನುಷ್ಯ ವರ್ಗವಿದ್ದಂತೆ ಗೋವುಗಳು ನಿರ್ಲಿಯಗಟ್ಟಲೆ ಭಾರತೀಯರಿಗೆ ತಾಯಿಯಾಗಿರುತ್ತವೆ. ಹಿಂದೂಧರ್ಮದ ವಾಸ್ತವಿಕ ಗುರಿಯೇ ಗೋರಕ್ಷಣೆ ಎಂಬುದಾಗಿ ಗಾಂಧೀಜಿ ವ್ಯಕ್ತಮಾಡಿದ್ದಾರೆ.

ಗೋ ರಕ್ಷಣೆ

ಗೋರಕ್ಷಣೆಯು ಬಹು ಪವಿತ್ರವಾದ ಕೆಲಸವಾಗಿದೆ, ಗೋವುಗಳು ತಮ್ಮ ದೇಹದ ಬೆಳವಣಿಗೆಗೂ, ಮಾನಸಿಕ ಬೆಳವಣಿಗೆಗೂ ಪ್ರಾಮುಖ್ಯವಾದ ಅಮೃತ ಸದೃಶವಾದ ಹಾಲನ್ನು ಕೊಡುತ್ತವೆ ; ಹಾಲು ಆಹಾರ ಪಾಕೀಯಗಳಲ್ಲಿ ಅತ್ಯಶ್ರಮವಾದುದೆಂದೆನಿಸಿಕೊಂಡಿದೆ ; ಅದರಲ್ಲಿ ದೇಹಬೆಳವಣಿಗೆಗೆ ಬೇಕಾದ ಸಮಸ್ತ ಪೋಷಣಾಂಶಗಳು ಯೋಗ್ಯವಾದ ಪ್ರಮಾಣದಲ್ಲಿವೆ : ಆದುದರಿಂದ ಇಷ್ಟು ಪ್ರಾಮುಖ್ಯವಾದ ವಸ್ತುವನ್ನೀಯುವ ಗೋಮಾತೆಯ ಕಡೆಗೆ ನಾವು ಹೆಚ್ಚಿನ ಲಕ್ಷ್ಯವನ್ನು ಕೊಡಲೇಬೇಕು, ಹಾಗೂ ಇದು ಸ್ಮೃತಿಯೂಬ್ಬ ಭಾರತೀಯನ ಕರ್ತವ್ಯವಾಗಿದೆ

ಭರತಖಂಡವು ಹಿಂದಿನ ಕಾಲದಲ್ಲಿ ಗೋಸಂಪತ್ತಿನಿಂದ ತುಂಬಿತ್ತು : ಆದರೆ ಈಗ ಅದು ಬಹಳ ಹೀನಾವಸ್ಥೆಯಲ್ಲಿದೆ ; ಅದರಲ್ಲೂ ದಕ್ಷಿಣ ಹಿಂದೂಸ್ಥಾನದಲ್ಲಿ ಬಹು ಹೀನಾವಸ್ಥೆಗೆ ಬಂದಿದೆ ; ಕಾರಣ ಗೋವುಗಳ ಸಾಕಣೆಯು ಕೆಲಸದಲ್ಲಿ ಜನರು ಅಷ್ಟೊಂದು ಉತ್ಸುಕರಾಗಿಲ್ಲ ನಮಗೆ ಹಾಲಿನ ಕೊರತೆಯು ಬಹಳವಾಗಿದೆ ; ಹಾಗಿದ್ದರೂ ಕೂಡಾ ಜನರು ಅವುಗಳ ಅಭಿವೃದ್ಧಿಗೆ ಮನಸ್ಸು ಕೊಡದಿರುವುದು ಶೋಚನೀಯವಾಗಿದೆ ; ಗೋವುಗಳ ಪ್ರಾಮುಖ್ಯತೆಯು ಕುರಿತಾಗಿ ಪಕಲ ಶಾಸ್ತ್ರಗಳೂ ಸಾರುತ್ತಿವೆ : ನಮ್ಮ ಪುರಾಣಗಳಲ್ಲೂ ಹಾಗೂ ವೇದಗಳಲ್ಲೂ ಗೋವಿನ ಪ್ರಾಮುಖ್ಯತೆಯು ಬಹಳವಾಗಿ ಉಲ್ಲೇಖಿಸಲ್ಪಟ್ಟಿದೆ: ಗೋದಾನ, ಗೋಪೂಜೆಗಳಿಂದ ವಿಶೇಷ ಪುಣ್ಯವು ಲಭಿಸುವುದು.

ಪಾಶ್ಚಾತ್ಯ ದೇಶಗಳಲ್ಲಿ ಹಾಲು ಹೇರಳವಾಗಿ ಸಿಗುವುದು : ಅಲ್ಲಿ ಪ್ರತಿಯೊಬ್ಬ ಮನುಷ್ಯನಿಗೆ 25 ಯಾ 26 ಔನ್ಸು ಹಾಲು ದೊರೆಯುವಾಗ ನಮ್ಮಲ್ಲಿ ಕೇವಲ ಪ್ರತಿಯೊಬ್ಬನಿಗೆ 4 ಯಾ 5 ಔನ್ಸುಗಳು ಸಿಗುವುದೆಂಬುವುದು ಬಹು ಲಜ್ಜಾಸ್ಪದವಾದ ವಿಷಯವಾಗಿದೆ. ಹಾಲಿನ ಯಾದ ಅಭಿಪ್ರಾಯವನ್ನು ತಿಳಿಯದೆ ಕೊರತೆಯಿಂದಾಗಿ ಜನರ ಆಯುಷ್ಯ ಕ್ಷೀಣವಾಗುತ್ತಾ ಬರುತ್ತಲಿದೆ ; ಪಾಶ್ಚಾತ್ಯ ದೇಶದಲ್ಲಿ ಜನರ ಜೀವಮಾನ ಕಾಲವು 50 ವರ್ಷಗಳಿಂದ 60 ವರ್ಷಗಳಿರುವಾಗ ನಮ್ಮ ದೇಶದಲ್ಲಿ 25 ವರ್ಷಗಳಿಂದ 30 ವರ್ಷಗಳು ಮಾತ್ರ ಇರುವುದು ; ಇದಕ್ಕೆ ದೇಶದಲ್ಲಿ ಹಾಲಿನ ಉತ್ಪತ್ತಿ ಕಡಮೆಯಾಗಿರುವುದೇ ಕಾರಣ ; ವೈದ್ಯಕೀಯ ದೃಷ್ಟಿಯಿಂದಲೂ ಹಾಲು ಉತ್ತಮವಾಗಿದೆ; ಹಾಲು, ಬೆಣ್ಣೆ, ತುಪ್ಪ ಮೊದಲಾದುವುಗಳೊಡನೆ ಹಲವು ಔಷಧಗಳನ್ನು ಕೊಳ್ಳುವುದರಿಂದ ಅನೇಕ ರೋಗಗಳು ಉಪಶಮನ ಹೊಂದುವುವು. ರೋಗಿಗಳ ಪಥ್ಯಕ್ಕೆ ಹಾಲೇ ಮುಖ್ಯಾಧಾರವಾಗಿದೆ : ಹಾಲನ್ನು ಯಾವಾಗಲೂ ಸೇವಿಸುವವರು ದೃಢಕಾಯರಾಗಿಯೂ ಚುರುಕು ಬುದ್ಧಿಯುಳ್ಳವರಾಗಿಯೂ ಇರುತ್ತಾರೆ. ಬೆಂಗಳೂರಿನಲ್ಲಿ ಸರಕಾರದವರೇ ಒಂದು 'ಡೈರಿಫಾರಂ' ನ್ನು ತೆರೆದು ಅಲ್ಲಿಯ ದನಗಳ ಹಾಲನ್ನು ದಿನದ ಬೇರೆಬೇರೆ ಹೊತ್ತುಗಳಲ್ಲಿ ಕರೆದು ಅನೇಕ ತಂದ ಶೋಧನೆಗಳನ್ನು ನಡೆಸಿ ಅದರಿಂದ ಅನೇಕ ವಿಷಯ ಸಂಗ್ರಹಿಸುತ್ತಾರೆ; ಇಂತಹ ಸಂಶೋಧನಾಲಯವೂ ಗೋಮಾತೆಯು ಕೊಡುವ ಹಾಲಿನ ಉತ್ಕೃಷ್ಟತೆಯನ್ನು ಪ್ರದರ್ಶಿಸುತ್ತದೆ.

ಹಿಂದೂಗಳಲ್ಲದ ಅನ್ಯ ಮತೀಯರೂ ಕೂಡ ಗೋವಿನ ಹಾಲನ್ನು ಉಪಯೋಗಿಸುತ್ತಾರೆ ; ಹಾಗೂ ಅವುಗಳನ್ನು ಸಂರಕ್ಷಿಸುವರು. ಇಸ್ಲಾಂ ಮತಸ್ಥಾಪಕರಾದ ಮಹಮದ್ ಪೈಗಂಬರ್‌ರವರು ಕೂಡಾ ದೇವತಾ ಕಾರ್ಯಗಳನ್ನು ನಡೆಸುವ ಸಮಾರಂಭದಲ್ಲಿ ಗೋವಧೆಯು ನಿಷೇಧಿಸಲ್ಪಟ್ಟಿದೆ ಎಂದು ಸಾರಿದ್ದಾರೆ. ಇಸ್ಲಾಂ ಎಂಬ ಶಬ್ದವನ್ನು ನಾವು ಅರ್ಥಮಾಡುವಾಗ ಮಂಗಲವೆಂದು ಅರ್ಥಮಾಡುತ್ತೇವೆ ; ಹೀಗೆ ಮಂಗಳವೆಂದೆನಿಸಿಕೊಳ್ಳುವ ಈ ಮತವು ಗೋವಧೆಯನ್ನು ಮಾನ್ಯ ಮಾಡುವುದಿಲ್ಲ; ಆದರೆ ಈ ಸಂಗಡದ ಕೆಲವು ಜನರು ಇದರ ಸರಿಯಾದ ವಿಷಯವಾಗಿದೆ. ಹಾಲಿನ ಯಾದ ಅಭಿಪ್ರಾಯವನ್ನು ತಿಳಿಯದೆ ಗೋವಧೆಯನ್ನು ಮಾಡುತ್ತಿದ್ದಾರೆ ; ಉತ್ತರ ಹಿಂದೂಸ್ಥಾನದಲ್ಲಿ ಗೋಸಾಯಿಗಳೆಂಬ ಸನ್ಯಾಸಿಗಳಿದ್ದಾರೆ ; ಇವರು ಗೋವಧೆಯು ನಿಷೇಧಕ್ಕಾಗಿ ಬಹಳ ಎಚ್ಚರ ಹೂಡಿ ಬಹಳ ಕಷ್ಟಪಟ್ಟು ತಮ್ಮ ಅವಿಶ್ರಾಂತವಾದ ಶ್ರಮದಿಂದ ಗೋವಧೆಯನ್ನು ನಿಲ್ಲಿಸಿರುತ್ತಾರೆ ; ಸರಕಾರವು ಚಳವಳಿ ಹೂಡಿದವರನ್ನು ಕಾರಾಗೃಹವನ್ನು ಪ್ರವೇಶಿಸಲು ಹಿಂಜರಿಯಲಿಲ್ಲ ; ಈ ಗೋಸಾಯಿಗಳ ಪರಿಶ್ರಮದಿಂದ ಉತ್ತರ ಹಿಂದೂಸ್ಥಾನದಲ್ಲಿ ಗೋವಧೆಯು ನಿಲ್ಲಿಸಲ್ಪಟ್ಟಿದೆ.

ಆರೋಗ್ಯದ ಹಿತದೃಷ್ಟಿಯಿಂದ ಗೋವು ಹಾಗೂ ಗೋಮೂತ್ರವೆಂಬುವುದು ಉತ್ತಮವಾದ ಕ್ರಿಮಿನಾಶಕವೆಂದು ಪ್ರಾಚೀನ ಕಾಲದಿಂದಲೂ ಪರಿಗಣಿಸಲ್ಪಟ್ಟಿದೆ. ಗೋಮಯದಲ್ಲಿ ರೋಗಾಣುಗಳನ್ನೂ ಕ್ರಿಮಿಗಳನ್ನೂ ನಾಶಗೊಳಿಸುವ ಸಾಮರ್ಥ್ಯವಿದೆ : ಅವುಗಳ ಸೆಗಣಿ, ಮೂತ್ರ ಮೊದಲಾದವುಗಳು ಉತ್ಕೃಷ್ಟವಾದ ಗೊಬ್ಬರವಾಗಿವೆ. ಸಸ್ಯ ಸಂಪತ್ತು ಅತ್ಯಧಿಕವಾಗಬೇಕಾದರೆ ಉತ್ತಮವಾದ ಗೊಬ್ಬರವು ಅತ್ಯಾವಶ್ಯಕವಾಗಿದೆ. ಗೋಮಾತೆಯಿಂದ ನಾವು ಪಡೆಯುವ ಪ್ರಯೋಜನಗಳು ಅಷ್ಟಿಷ್ಟಲ್ಲ ; ಆದುದರಿಂದ ಪ್ರತಿಯೊಬ್ಬನೂ ಗೋಮಾತೆಯನ್ನು ಸಂರಕ್ಷಿಸುವುದಕ್ಕೂ ಅದರ ವಂಶಾಭಿವೃದ್ಧಿ ಕಾರ್ಯದಲ್ಲೂ ಬದ್ಧಕಂಕಣನಾಗಲೇಬೇಕು. ಅವುಗಳನ್ನು ಯೋಗ್ಯ ರೀತಿಯಲ್ಲಿ ಸಲಹಿ ಅವುಗಳ ವಂಶಾಭಿವೃದ್ಧಿಯಗುವಂತೆಯೂ ಭಾರತ ದೇಶವು ಕ್ಷೀರ ಸಂಪತ್ತಿನಿಂದ ತುಂಬಿತುಳುಕುವಂತೆಯೂ ಪ್ರಯತ್ನಿಸಬೇಕು.

(ಶ್ರೀ ಶ್ರೀ ಪುತ್ತಿಗೆ ಮಠದ ಶ್ರೀ ಸುಜ್ಞಾನೇಂದ್ರ ತೀರ್ಥ ಶ್ರೀಪಾದಂಗಳವರು ಉಡುಪಿಯಲ್ಲಿ ಜರಗಿದ ಜಾನುವಾರು ಪ್ರದರ್ಶನದಲ್ಲಿ ಕೊಟ್ಟ ಭಾಷಣದ ಆಧಾರದಿಂದ) — ಧರ್ಮಬೋಧ

25 ವರ್ಷಗಳಲ್ಲಿ 20 ಕರುಗಳು

ಒಂದು ಎಮ್ಮೆಯು ತನ್ನ 25 ವರ್ಷದ ಜೀವನದಲ್ಲಿ 20 ಕರುಗಳನ್ನು ಹಾಕಿದೆ : ಇವುಗಳಲ್ಲಿ 13 ಹೆಣ್ಣು ಕರುಗಳು ಮತ್ತು 6 ಕೋಣಗಳು — ಕೃಷ್ಣಾ ಜಿಲ್ಲೆಯ ಪುತಿಗಡ್ಡಾ ಗ್ರಾಮದ ಶ್ರೀ ಗೋಕರಾಜು ಲಕ್ಷ್ಮೀಪತಿರಾಜು ಎಂಬುವರು 1936 ರಲ್ಲಿ ಈ ಎಮ್ಮೆಯನ್ನು ಅದು 'ಕೇವಲ ನಾಲ್ಕುವರ್ಷದ್ದಿದ್ದಾಗ ಕೊಂಡರು ; ಆಗ ಇದು ಒಂದು ಕೋಣಗಡುವನ್ನು ಹಾಕಿತ್ತು.

ಪಶುಪಾಲನೆಗೆ ಉತ್ತೇಜನ

ನವದೆಹಲಿ 15— ವ್ಯವಸಾಯ, ಪಶುಪಾಲನೆ ಹಾಗೂ ತತ್ಸಂಬಂಧ ಕ್ಷೇತ್ರಗಳಲ್ಲಿ ನಡೆಸಿದ ಗಮನಾರ್ಹವಾದ ಸಂಶೋಧನಾ ಕಾರ್ಯಕ್ಕೆ ಸೂಕ್ತ ರೀತಿಯಲ್ಲಿ ಮನ್ನಣೆ ನೀಡುವ ಉದ್ದೇಶದಿಂದ ಭಾರತೀಯ ಕೃಷಿ ಸಂಶೋಧನಾ ಪರಿಷತ್ತಿನವರು ಪ್ರತಿ ವರ್ಷವೂ ಪ್ರತಿಯೊಂದು ಬಹುಮಾನವೂ 5000 ರೂಗಳ ಮೌಲ್ಯದ ಹನ್ನೊಂದು ಬಹುಮಾನವನ್ನು ನೀಡುವರು

ದನಗಳ ಗುಂಪನ್ನು ಅಧಿಕಗೊಳಿಸಲು

ವಾಷಿಂಗ್ಟ್ಟ— ಶೀಘ್ರಗತಿಯಿಂದ ದನಗಳ ಗುಂಪನ್ನು ಅಧಿಕಗೊಳಿಸುವುದರಲ್ಲಿ ಅಡ್ಡಶಕಗಳ ಕ್ರಮದಿಂದ ದೊರಕುವ ಅನುಕೂಲಗಳನ್ನು ಕುರಿತು ಶಾನು ಟ್ಯೂಟ್ಸ್‌ಎಲೆಗೆ ಸಮೀಪದಲ್ಲಿರುವ ಮೇರೆಲ್ಯಾಂಡ್ ಲ್ಯಾಬೊರೇಟರಿಗಳಲ್ಲಿ ಹೊಸ ಪ್ರಯೋಗ ಪರೀಕ್ಷೆಗಳನ್ನು ನಡೆಸುವುದಾಗಿ ವ್ಯವಸಾಯ ಇಲಾಖೆ ಪ್ರಕಟಿಸಿದೆ.

ಮೈಸೂರು ರಾಜ್ಯದಲ್ಲಿ ಪಶು ಸಂಗೋಪನೆ

ಪಶುಸಂಗೋಪನ ಹಾಗು ಚಿಕಿತ್ಸೆ ಶಾಖೆಯವರು ಕಳೆದ ಮಾರ್ಚಿ ತಿಂಗಳಲ್ಲಿ ಬೆಳಗಾವಿ ಡಿವಿಜನ್ನಲ್ಲಿ 4849 ದನಗಳಿಗೆ ಚಿಕಿತ್ಸೆ ಮಾಡಿದ್ದಲ್ಲದೆ 3255 ದನಗಳಿಗೆ ಔಷಧವನ್ನು ಪೂರೈಸಿದರು; ಪಾತೆಯು ಸಿಬ್ಬಂದಿಯವರು ಸಂಚಾರದ ಮೇಲಿದ್ದಾಗ 4276 ದನಗಳಿಗೆ ಔಷಧೋಪಚಾರ ಒದಗಿಸಿದರು ; ಬೇರೆಬೇರೆ ರೋಗಗಳ ಪ್ರತಿಬಂಧಕ್ಕಾಗಿ 18231 ದನಗಳಿಗೆ ಮದ್ದು ಚುಚ್ಚಲಾಯಿತು. (ಮೈಸೂರು ವಾಣಿ)

ಅಪೆರಾ— ಕೀರ್ತಿಯುತ 5 ನೇ ವಾರ

ಮನೆ ತುಂಬಿದ ಹೆಣ್ಣು (ಕನ್ನಡ)

ಪಾತ್ರ—ರಾಮಚಂದ್ರಶಾಸ್ತ್ರಿ, ಉದಯಕುಮಾರ್, ನರಸಿಂಹರಾಜು, ಬಾಲಕೃಷ್ಣ
ರಮಾದೇವಿ, ಜಯಶ್ರೀ, ಪದ್ಮಾವತಿ ಲಕ್ಷ್ಮಿ, ಲಲಿತಾ ರಾವ್

ಪ್ರತಿ ದಿನ 3 ಆಟಗಳು —

ವುಡ್‌ಲ್ಯಾಂಡ್ಸ್ 30-5-58 ರಿಂದ ವೈಭವ ಆರಂಭ

ನವನಂದರ ಕೈಗೆ ಸಿಕ್ಕಿ ನರಳಿ, ಮಹಿಮಾನ್ವಿತ ಚಾಣಕ್ಯನನ್ನು ಅವಮಾನಿಸಿ ಪಡೆದು, ಕೀರ್ತಿವಂತನಾಗಿ ಚಕ್ರಾಧಿಪತ್ಯವನ್ನಾಳಿದ ಚಂದ್ರಗುಪ್ತನ ಕಥೆಯು

ಕಾತರತಾಮಲಕವಾಗಿ ಚಿತ್ರಿಸಲಾಗಿದ್ದು, ಸಕಲರೂ [ನೋಡಿ

ಅನುಭವಿಸಬೇಕಾದ ಅತ್ಯನೋಘ ಚಿತ್ರ

ಸಾಮ್ರಾಟ್ ಚಂದ್ರಗುಪ್ತ (ಹಿಂದಿ)

ನಟವರ್ಗ— ನಿರೂಪರಾಯ್, ಭರತಭೂಷಣ್, ಉಲ್ಹಾಸ್, ವ್ಯಾಸ್

[ದಿನವಹಿ 3 ಪ್ರದರ್ಶನಗಳು]

Edited, Printed & Published by Dharma Prachara Nirala M S Krishna Rao, at the Satyavadi Press Chamrajpuram Mysore



ಲೆನಿನ್ ಸ್ಥಾಪಿತ ರಾಜ್ಯ ಕೃಷಿಕ್ಷೇತ್ರದಲ್ಲಿ ಗೌಶಿಕ್ತಿ ಎಂ ಇವನೋವಾ ಪಶುಗಳಿಗೆ ಮೇವನ್ನೀಯುತ್ತಿರುವುದು Courtsey— Sovietland